ಮಹಾಂತಯ್ಯಾ ಕೆ. ಮಠ, ಬಂದರವಾಡ

*ಸೊಳ್ಳೆಗೂ, ಸುಳ್ಳಿಗೂ ಇರುವ ವ್ಯತ್ಯಾಸವೇನು?*



ಸೊಳ್ಳೆ ವೈದ್ಯವೃತ್ತಿಗೆ ಸಹಾಯಕ, ಸುಳ್ಳು ವಕೀಲೀ ವೃತ್ತಿಗೆ ಸಹಾಯಕ.

ಕುಮಾರ ಚಲವಾದಿ, ಹೊಳೆನರಸಿಪುರ

*ಕನ್ನಡ ಕಲಿಕೆ ಕಡ್ಡಾಯವಲ್ಲ ಎಂದರೆ ಕನ್ನಡವನ್ನು ಉಳಿಸಿ, ಬೆಳೆಸುವವರು ಯಾರು?*

ಹುಚ್ಚಪ್ಪ! ಯಾವುದೇ ಆದರೂ ಅಷ್ಟೇ – ಹೇರಿದರೆ ಹೊಲಸು, ಬಿಡುಬೀಸಾದರೆ ಹುಲುಸು.

ಪ್ರಕಾಶ್ ಸೋಡಾ ರಾಜಪ್ಪ, ಹೊಸನಗರ

*ಇಲ್ಲೊಬ್ಬರಿಗೆ ಹೆಂಡತಿ ಜೊತೆಗಿದ್ದರೂ ತಮ್ಮ ಹಳೆಯ ಗೆಳತಿಯ ನೆನಪು ಸದಾ ಕಾಡುತ್ತಿದೆಯಂತೆ. ಪರಿಹಾರ ಸೂಚಿಸಿ.*

ಚೆನ್ನಾಗಿ ಕುಡಿಸಿಬಿಡಿ, ನಿಜ ಹೊರಬೀಳುತ್ತದೆ, ಹೆಂಡತಿ ದುರ್ಗಿಯಾಗುತ್ತಾಳೆ, ಸಂಸಾರ ಸರಿಯಾಗುತ್ತದೆ!

ಜೆ.ಸಿ. ರವಿಕುಮಾರ್, ಜಯಸುವರ್ಣಪುರ

*ಇತ್ತೀಚೆಗೆ ಗಂಡನನ್ನು ಏಕವಚನದಲ್ಲಿ ಕರೆಯುವುದು ಫ್ಯಾಷನ್ ಆಗುತ್ತಿದೆಯಲ್ಲಾ...?*



'ಇದೇ ವಾಸಿ... ಮುಂದೆ ಸಿಳ್ಳೆ ಹಾಕಿ ಕರೆಯುವ ಕಾಲ ಬರುತ್ತದೆ' ಎಂದನೊಬ್ಬ ಹೆಂಗುಲಾಮ.

ಸೋಮಣ್ಣ, ಎಂ.ಎಂ. ಹಳ್ಳಿ

*ಅಧಿಕಾರ ಕ್ಷಣಿಕ. ಆದರೂ ಪೈಪೋಟಿ ಏಕೆ?*

ಪೈ ಇರುವ ಕಡೆಯೆಲ್ಲಾ ಪೋಟಿ ಇರುವುದು ಸಹಜ.

ರಮೇಶ. ಜ. ಬೊಂಗಾಳೆ, ಬೈಲಹೊಂಗಲ

*ನಿತ್ಯ ಉದಯಿಸುವ ಸೂರ್ಯನಿಗೆ ಬೇಸರವೇ ಇಲ್ಲವೇ ಸಾರ್?*

ನಿನ್ನೆ ಇಲ್ಲದ ಮೊಗ್ಗು ಇಂದು; ನೆನ್ನೆ ಇಲ್ಲದ ಕೂಸು ಇಂದು; ನಿತ್ಯನೂತನತೆ ಇರುವಾಗ ನೇಸರನಿಗೆ ಬೇಸರವೇ ಇಲ್ಲ.

ಓಂಚನ್ನೇಶ್, ಅರಬಿಳಚಿ ಕ್ಯಾಂಪ್

*ಇಲ್ಲೊಬ್ಬಳು 'ಬಾ ನಲ್ಲ ಮಧುಚಂದ್ರಕೆ' ಅಂತ ಕರೀತಾಳಲ್ಲ...?*

ಫೇಸ್‌ಬುಕ್ ರೋಗದ ಪರಮಾವಧಿ ಇದು. ನಿಮ್ಮ ಹೆಂಡತಿ ನಿಮ್ಮನ್ನು ಕರೆದದ್ದನ್ನೂ ಹೀಗೆ ಪೋಸ್ಟ್ ಮಾಡಿ ಶೇರ್ ಮಾಡುವುದೇ.... ಛೆ!

ವಿ.ಎಸ್. ಹಿಂದೂಪುರ, ಬಳ್ಳಾರಿ

*ಹಾಸಿಗೆ ಇದ್ದಷ್ಟು ಕಾಲು ಚಾಚು ಅನ್ನುತ್ತಾರೆ. ಹಾಸಿಗೆಯೇ ಇಲ್ಲ, ಕಾಲೆಲ್ಲಿ ಚಾಚಲಿ ಗುರುವೆ?*

ಪಾಪ! ಮೊದಲು ಹಾಸಿಗೆಗೆ ಆಗುವಷ್ಟು ಹಣ ಪಡೆಯಲು ಕೈಚಾಚಿ.

ವಿದ್ಯಾ ಎನ್. ಪೈ, ಕಾಸರಕೋಡ

*ನಾಡಿನಾದ್ಯಂತ ನಾಯಿಕೊಡೆಗಳಂತೆ ಜ್ಯೋತಿಷ್ಯಾಲಯಗಳು ಏಕೆ ಹುಟ್ಟಿಕೊಳ್ಳುತ್ತಿವೆ?*

ಹರಕೆ ಹೊತ್ತು ಬೋಳಿಸಿಕೊಳ್ಳುವವರು ಜಾಸ್ತಿಯಾದ ಮೇಲೆ ಕ್ಷೌರದಂಗಡಿಗಳೂ ಹೆಚ್ಚಲೇಬೇಕಲ್ಲ!

ಅಲ್ಲಾ ಬಕಷ್, ಮಧುಗಿರಿ

*ಮುಖ್ಯಮಂತ್ರಿಗಳ ಮುಂದಿನ ಭಾಗ್ಯ ಯಾವುದು?*

ಪಕ್ಷದಲ್ಲೇ ಭಿನ್ನಮತ ಎದುರಿಸುವ ದೌರ್ಭಾಗ್ಯ.

ಚಿದಂಬರ ಕಾಕತ್ಕರ್, ಮಂಗಳೂರು

*ದನ ಕರುಗಳನ್ನು ಕಟ್ಟಿದಂತೆ ತೆರಿಗೆ, ಶುಲ್ಕ, ದಂಡ, ಇತ್ಯಾದಿಗಳನ್ನು ಏಕೆ 'ಕಟ್ಟು'ತ್ತಾರೆ?*

ಕಟ್ಟದೆ ಬಿಟ್ಟರೆ ಸರಿಯಾಗಿ ಗುಮ್ಮಿಸಿಕೊಳ್ಳುವ ಸಾಧ್ಯತೆ ಇರುವುದರಿಂದ.

ಜಯಕುಮಾರ್, ಚನ್ನರಾಯಪಟ್ಟಣ

*ನಾನು ಒಬ್ಬ ಸಬ್‌ಇನ್ಸ್‌ಪೆಕ್ಟರ್ ಮಗಳನ್ನು ಪ್ರೀತಿಸಿದ್ದೇನೆ. ಅವರ ತಂದೆ ತಾಯಿಗೆ ತಿಳಿಸಲು ಹೆದರಿಕೆ. ಉಪಾಯ ಹೇಳಿಕೊಡಿ.*

ಅವರ ಜ್ಯೂರಿಸ್ಡಿಕ್ಷನ್ ಇರುವ ಪಾರ್ಕಲ್ಲಿ ಅವರ ಮಗಳೊಡನೆ ಅವೇಳೆಯಲ್ಲಿ ಕುಳಿತುಕೊಳ್ಳಿ. ಮಿಕ್ಕಿದ್ದೆಲ್ಲಾ ತಾನಾಗೇ ನಡೆಯುತ್ತದೆ.

ಮೇಟಿ ಕೊಟ್ರಪ್ಪ, ಬಸರಕೋಡು

*ಮದುವೆಗೂ, ಮಸಣಕ್ಕೂ ವ್ಯತ್ಯಾಸವೇನು?*

ಒಂದು ಕಡೆ ಗಂಡಪ್ರದಾನ, ಇನ್ನೊಂದು ಕಡೆ ಪಿಂಡಪ್ರದಾನ!

## ಬಹುಮಾನಿತ ಪ್ರಶ್ನೆ

ಕೆ.ಎಸ್. ಸುದರ್ಶನ್, ಮೈಸೂರು

ನಮ್ಮ ವಯಸ್ಸನ್ನು ಹೇಳುವಾಗ ಕನ್ನಡದಲ್ಲಿ '60 ನಡೀತಿದೆ' ಎಂದೂ, ಇಂಗ್ಲಿಷ್‌ನಲ್ಲಿ 60 ರನ್ನಿಂಗ್' ಎಂದೂ ಹೇಳುವುದೇಕೆ?

ಏಕೆಂದರೆ ಇಂಗ್ಲಿಷ್ always in a hurry ಇರುವವರ ಭಾಷೆ, ಕನ್ನಡ ನಿಧನಿಧಾನಸ್ಥರ ಭಾಷೆ.

ಎಂ.ಎನ್. ಸೋಮಶೇಖರ್, ಮೈಸೂರು

*ತನ್ನನ್ನು ಸಂಶಯದೃಷ್ಟಿಯಿಂದ ನೋಡಿದ ಶ್ರೀರಾಮನಿಗೆ ಸೀತೆಯು ಎಲ್ಲರೂ ಮೆಚ್ಚುವಂತೆ ಏನು ಯುಕ್ತಿ ಮಾಡಬಹುದಿತ್ತು?*

'ರಾಮ, ಈ ಯುಗದ 24/7 ಜಂಟಿ ಸಿಸಿಟಿವಿಗಳಾದ ಸೂರ್ಯ–ಚಂದ್ರರನ್ನೇ ಕರೆದು ಕೇಳಿ ನಿರ್ಧರಿಸು' ಎನ್ನಬಹುದಿತ್ತು!

ಕೆ.ಎಂ. ಲಿಂಗರಾಜು, ನಂಜನಗೂಡು

*ಸೈನಿಕರ ಬದಲು ಕೆಲಕು ರಾಜಕೀಯದವರನ್ನು ದೇಶ ಕಾಯಲು ಗಡಿಯಲ್ಲಿ ನಿಯೋಜಿಸಿದರೆ?*



ಗುಡ್. ಆಗ ಯುದ್ಧವೇ ಇರುವುದಿಲ್ಲ. ತಮಗೆ ಬೇಕಾಷ್ಟು ಜಾಗವನ್ನು ಇವರ 'ಭಾರತ್ ರಿಯಲ್ ಎಸ್ಟೇಟ್'ನಿಂದ ಕೊಂಡುಬಿಡುತ್ತಾರೆ.

ಮಹಾವೀರ ಕಾಸರ, ಶಿವಮೊಗ್ಗ

*ತಾಯಿ ಮೊದಲ ಗುರು ಆದರೆ ತಂದೆ?*

ಆ ರೆಸಿಡೆನ್ಷಿಯಲ್ ಸ್ಕೂಲ್‌ನ ವಾರ್ಡನ್.

ಪಿ.ಜೆ. ರಾಘವೇಂದ್ರ, ಮೈಸೂರು

*ಮಹಿಳಾ ಆಯೋಗಕ್ಕೆ ಪುರುಷರೇಕೆ ಅಧ್ಯಕ್ಷರಾಗಬಾರದು?*

ಹೆಣ್ಣನ್ನು ಕಂಡ ತಕ್ಷಣ ಚಪಲಕ್ಕೋ, ಭಯಕ್ಕೋ ನಾಲಿಗೆ ತೊದಲತೊಡಗಿ ವಿಚಾರಣೆ ನಡೆಸುವುದು ಕಷ್ಟವಾಗುವುದರಿಂದ.

ಪಿ.ಎನ್. ಶ್ರೀವತ್ಸ, ಬೆಂಗಳೂರು

*ಮನುಷ್ಯರು ಮೈಯನ್ನು ದಂಡಿಸುವಷ್ಟು ಸುಲಭವಾಗಿ ಮನಸ್ಸನ್ನು ದಂಡಿಸುವಂತಿದ್ದರೆ..?*

ಹುಚ್ಚಾಸ್ಪತ್ರೆಗಳು ಹೌಸ್‌ಫುಲ್ ಆಗುತ್ತಿದ್ದವು.

■ ರಾಮ್